## ವಿಶ್ವದ ಅತಿ ಧೈರ್ಯವಂತ ಪ್ರಾಣಿ

# ಹನಿ ಬ್ಯಾಡ್ಜರ್



ಪ್ರಾಣಿ ಪ್ರಪಂಚದಲ್ಲೊಂದು ಪುಟ್ಟ ಪ್ರಾಣಿ ತನ್ನ ಧೈರ್ಯ, ಚಾಣಾಕ್ಷತನದಿಂದ ಎಂತಹ ದೊಡ್ಡ ಪ್ರಾಣಿಯನ್ನಾದರೂ ಎದುರಿಸುವ ಸಾಹಸಕ್ಕೆ ಕೈ ಹಾಕುತ್ತದೆ ಎಂದರೆ ನಂಬಲು ಸಾಧ್ಯವೇ? ಅಸಾಧ್ಯ ಎನಿಸಿದರೂ ನಿಜ.

ಆ ಪುಟ್ಟ ಪ್ರಾಣಿಯ ಹೆಸರು 'ಹನಿ ಬ್ಯಾಡ್ಜರ್'. ಕೇವಲ ಎರಡು ಅಡಿ ಉದ್ದ, ಒಂದು ಅಡಿ ಎತ್ತರ. ರಟೇಲ್ ಕುಟುಂಬದ ಮಾಂಸಾಹಾರಿ ಸಸ್ತನಿ, ಮಿಸ್ಸೆಲ್ ನೀರು ನಾಯಿ ಮತ್ತು ಮಾರ್ಟಿನ್‌ಗಳ ಕುಟುಂಬದ ಸದಸ್ಯ. ತನ್ನ ದೇಹಕ್ಕಿಂತ 10 ಪಟ್ಟು ಎತ್ತರ, ಉದ್ದ ಇರುವ ಪ್ರಾಣಿಗಳನ್ನೇ ನೇರವಾಗಿ ಎದುರಿಸಿ ಹಿಮ್ಮೆಟ್ಟುತ್ತದೆ ಎಂಬುದೇ ಇದರ ಕುರಿತು ಕುತೂಹಲ ಹುಟ್ಟಲು ಕಾರಣವಾಯಿತು.

ಹನಿ ಬ್ಯಾಡ್ಜರ್ (**Honey Badger**) ಅನ್ನು ರಟೇಲ ಎಂತಲೂ, ವೈಜ್ಞಾನಿಕವಾಗಿ 'ಮೆಲ್ಲಿವೋರಾ' 'ಕೆಫೆನ್ಸಿಸ್' ಎಂತಲೂ, ಕನ್ನಡದಲ್ಲಿ 'ನೆಲಗರಡಿ' ಹಾಗೂ 'ತೋಡುಗ' ಎಂದೂ ಕರೆಯುತ್ತಾರೆ. ಇದಕ್ಕೆ 'ಕಬರ್ ಬಿಜ್ಜು' (ಸಮಾಧಿ ಅಗೆಯುವವನು) ಎಂದೂ ಆಡುಭಾಷೆಯಲ್ಲಿ ಕರೆಯುತ್ತಾರೆ. ಆಫ್ರಿಕಾ, ಏಷ್ಯಾ ಹಾಗೂ ಭಾರತದ ಬಂಡೀಪುರ ಅರಣ್ಯದಲ್ಲಿ ಕಾಣಸಿಗುವ ಇದು, ಸರ್ವಭಕ್ಷಕ ಹಾಗೂ ನಿರ್ಭಯ ಪ್ರಾಣಿ. ಹೆಚ್ಚಾಗಿ ಪೊದೆಗಳು ಮತ್ತು ಮರುಭೂಮಿಯಲ್ಲಿ ವಾಸಿಸುತ್ತದೆ.

**ನೋಡಲು ಸಣ್ಣ ಪ್ರಾಣಿಯಾದರೂ ಎಂತಹ ಪ್ರಾಣಿಯನ್ನಾದರೂ ಎದುರಿಸುವ, ಭಯವಿಲ್ಲದೆ ಓಡಾಡುವ ಸ್ವಭಾವದಿಂದ ಹನಿ ಬ್ಯಾಡ್ಜರ್ 'ವಿಶ್ವದ ಅತಿ ಧೈರ್ಯವಂತ ಪ್ರಾಣಿ' ಎಂಬ ಹೆಸರು ದಕ್ಕಿಸಿಕೊಂಡಿದೆ.**

■ ವಿದ್ಯಾಕುಮಾರ ಮ. ಬಡಿಗೇರ

ಬೆನ್ನಿನ ಮೇಲೆ ದಪ್ಪ, ಸಡಿಲ ಬಿಳಿ ಬೂದು ಬಣ್ಣದ ಹೊದಿಕೆ ಇದೆ. ಒಂಟಿಯಾಗಿ ಯಾರದೇ ಭಯವಿಲ್ಲದೆ ಓಡಾಡುವಂತಹ ಪ್ರಾಣಿ. ಇತರ ಪ್ರಾಣಿಗಳಂತೆ ಜೀವಭಯದಿಂದ ತಿರುಗಾಡುವ ಜಾಯಮಾನವೇ ಇದರದಲ್ಲ. ವಿಚಿತ್ರ ಶಬ್ದ ಮಾಡುತ್ತಾ ದಾಳಿ ಮಾಡುತ್ತದೆ. ಅದರ ಶಬ್ದ ಮತ್ತು ದಾಳಿಯ ರಭಸ ಯಾವುದೇ ಪ್ರಾಣಿಯನ್ನು ಕೂಡ ಬೆಚ್ಚಿಬೀಳಿಸುತ್ತದೆ. ಅತ್ಯಂತ ವಿಷಕಾರಿ ಸರ್ಪದೊಡನೆ ಹೋರಾಡಿ ಹಾವಿನಿಂದ ಅನೇಕ ಬಾರಿ ಕಚ್ಚಿಸಿಕೊಂಡರೂ ಕ್ಷಣ ಮಾತ್ರದಲ್ಲಿ ಮತ್ತೆ ಚೇತರಿಸಿಕೊಂಡು ಹಾವನ್ನು ಕೊಂದು ತಿಂದು ತೇಗಿಬಿಡುವ ತಾಕತ್ತು ಇದರದ್ದು.

ಹೆಸರೇ ಸೂಚಿಸಿರುವಂತೆ ಇದಕ್ಕೆ ಜೇನು ಅಂದರೆ ತುಂಬಾ ಇಷ್ಟ. ಜೇನು ಹಾಗೂ ಜೇನಿನ ಲಾರ್ವಾವನ್ನು ತಿನ್ನುತ್ತದೆ. ಹಾಗೆ ಹಾವು, ಕೀಟ, ಹಕ್ಕಿ, ಇಲಿಗಳನ್ನು ತಿಂದು ಬದುಕುತ್ತದೆ. ಕೆಲವು ಸಂದರ್ಭದಲ್ಲಿ ಹಣ್ಣು ಮತ್ತು ಬೇರುಗಳನ್ನು ತಿನ್ನುತ್ತದೆ. ವರ್ಷದ ಯಾವ ಸಮಯದಲ್ಲಾದರೂ ಸಂತಾನೋತ್ಪತ್ತಿ ಮಾಡುತ್ತವೆ. ಇವುಗಳ ಗರ್ಭಧಾರಣ ಅವಧಿ ಆರು ತಿಂಗಳು. ಒಮ್ಮೆಗೆ ಎರಡು ಮರಿಗೆ ಜನ್ಮ ನೀಡುತ್ತದೆ.

ನೋಡಲು ಸಣ್ಣ ಪ್ರಾಣಿಯಾದರೂ ಎಂತಹ ಪ್ರಾಣಿಯನ್ನಾದರೂ ಎದುರಿಸುವ, ಭಯವಿಲ್ಲದೆ ಓಡಾಡುವ ಸ್ವಭಾವದಿಂದಲೇ **'World's most fearless animal'** ಎಂಬ ಹೆಸರು ದಕ್ಕಿಸಿಕೊಂಡಿದೆ. ಸಿಂಹಗಳು, ಚಿರತೆ, ಹುಲಿಗಳು ಕೂಡ ಇದರ ತಂಟೆಗೆ ಬರುವುದಿಲ್ಲ. ಬಂದರೆ ಈ ಪುಟ್ಟ ಪ್ರಾಣಿ ಅವುಗಳ ಕಾಲಿಗೆ ಬುದ್ಧಿ ಹೇಳುವವರೆಗೆ ಬಿಡುವುದೇ ಇಲ್ಲ.

ಹನಿ ಬ್ಯಾಡ್ಜರ್‌ಗಳು ಎದುರಾಳಿಗಳ ಗುಪ್ತಾಂಗಗಳ ಮೇಲೆಯೇ ದಾಳಿ ಮಾಡುತ್ತವೆ. ಆ ಕಾರಣದಿಂದ ಪ್ರಾಣಿಗಳು ಇದರ ಸಹವಾಸವೇ ಬೇಡವೆಂದು ಓಡಿಹೋಗುತ್ತವೆ. ಗಿನ್ನಿಸ್ ದಾಖಲೆ ಪ್ರಕಾರ ಹನಿ ಬ್ಯಾಡ್ಜರ್ 'ವಿಶ್ವದ ಅತ್ಯಂತ ನಿರ್ಭೀತ, ನಿರ್ಭಯದಿಂದ ತಿರುಗಾಡುವ ಪ್ರಾಣಿ' ಎಂದು ಗುರುತಿಸಿಕೊಂಡಿದೆ. ■